(ಶ್ರೀ ಎಂ. ನಾಗಪ್ಪ)

ಇರುತ್ತಾರೆ. ಅದಕ್ಕಾಗಿ ಇಂತಹ ಒಂದು ವಿಷಯದ ಬಗ್ಗೆ 4 ವರ್ಷಗಳು ನೆಗೋಷಿಯೇಷನ್ಸ್ ಮಾಡಿದ್ದೀರಿ. ಆದರೂ ಅದು ಆಗಲಿಲ್ಲ. ಅಂದಮೇಲೆ ಇನ್ನೂ 10 ವರ್ಷಗಳು ಬೇಕಾಗುವುದೇ? ಇನ್ನೂ ಇತರ ನೆಗೋಷಿಯೇಷನ್ನಿಗೆ ತಮ್ಮ ಅವಧಿಯೇನು ಎಂಬುದನ್ನು ತಿಳಿಸುತ್ತೀರಾ?

ಶ್ರೀ ಎನ್. ಎಂ. ಕೊಟ್ರಬಸಯ್ಯ ಸೋಗಿ.—ನಮ್ಮ ಡಿಪಾರ್ಟ್‌ಮೆಂಟಿನಲ್ಲಿ ಆ ರೀತಿ ಏನೂ ಇಲ್ಲ. ಪ್ರತಿ ತಾಲ್ಲೂಕು ಮಾಟಿಂಗಿಗೂ ನಮ್ಮ ಅಧಿಕಾರಿಗಳು ಹೋಗಬೇಕೆಂಬ ಕಡ್ಡಾಯ ನಿಯಮ ವಿಲ್ಲ. ಅವಶ್ಯಕ ಬಿದ್ದಾಗ ಹೋಗಬಹುದು. ಈ ಕೆಲಸವನ್ನು ತಾಲ್ಲೂಕುಬೋರ್ಡಿನವರು ಹೆಚ್ಚು ಮುತುವರ್ಜಿ ವಹಿಸಿ ಮಾಡಬೇಕಾಗಿದೆ. ಅದರ ಬಗ್ಗೆ ನಮ್ಮ ಡಿಪಾರ್ಟ್‌ಮೆಂಟಿನಿಂದ ಏನೂ ತಡವಾಗಿಲ್ಲ.

ಶ್ರೀ ಚಿಕ್ಕೇಗೌಡ.—ಇದರ ಬಗ್ಗೆ ಒಂದು ಸರ್ಕ್ಯುಲರ್ ಹೊರಡಿಸಿದ್ದೀರಾ? ಅಂದಮೇಲೆ ಮಂತ್ರಿಗಳಾಗಿ ಹೀಗೆ ಹೇಳುವುದು ಸರಿಯೇ?

ಶ್ರೀ ಎನ್. ಎಂ. ಕೊಟ್ರಬಸಯ್ಯ ಸೋಗಿ.—ಯಾವ ಅಧಿಕಾರಿಯೂ ತಾಲ್ಲೂಕುಬೋರ್ಡ್ ಮಾಟಿಂಗಿಗೆ ರೆಗ್ಯುಲರಾಗಿ ಸದಸ್ಯರಾಗಿ ಅಟೆಂಡ್ ಮಾಡುತ್ತಾ ಇಲ್ಲ. ಅವಶ್ಯಕ ಬಿದ್ದಾಗ ಮಾತ್ರ ಅವರಿಗೆ ಸಂಬಂಧಪಟ್ಟ ವಿಷಯವಿದ್ದಾಗ ಮಾತ್ರ ಅಟೆಂಡ್ ಮಾಡಿ ಚರ್ಚೆ ಮಾಡುತ್ತಾರೆ.

ಶ್ರೀ ಎಂ. ಎಚ್. ಜಯಪ್ರಕಾಶ್ ನಾರಾಯಣ್.—ಈ ಕೆಲಸ ಮಾಡಲು 1966ರಿಂದ 1970 ರವರೆಗೂ ಇನ್ನೂ ತೀರ್ಮಾನವಾಗುವುದರಲ್ಲಯೇ ಇದೆ. ಆದರೆ ಈ ಬಗ್ಗೆ ಜಿಲ್ಲಾ ಅಭಿವೃದ್ಧಿ ಪರಿಷತ್ತಿನಲ್ಲಿ ಜಿಲ್ಲಾ ವಿದ್ಯಾಧಿಕಾರಿಗಳು ಅಲ್ಲಿಗೆ ಪಂಪುಸೆಟ್ಟುಗಳನ್ನು ಕೊಡುವ ವಿಷಯವನ್ನು ಯಾವಾಗಲಾದರೂ ಎತ್ತಿದ್ದಾರೆಯೇ?

ಶ್ರೀ ಎನ್. ಎಂ. ಕೊಟ್ರಬಸಯ್ಯ ಸೋಗಿ.—ಅಂತಹ ಪ್ರಸಂಗ ಬಂದಿಲ್ಲ. ಸ್ಥಳೀಯ ಸಂಸ್ಥೆಗಳು ಮತ್ತು ತಾಲ್ಲೂಕು ಬೋರ್ಡಿನವರು ಸರ್ಕಾರದ ಇರಾಖೆಗಳಿಗಿಂತ ಹೆಚ್ಚಿನ ಕೆಲಸವನ್ನು ಮಾಡುತ್ತಿದ್ದಾರೆ. ಆದರೆ ಏತಕ್ಕೆ ಇದು ತಡವಾಗಿದೆ ಎಂಬ ಬಗ್ಗೆ ಸಂಬಂಧಪಟ್ಟ ಅಧಿಕಾರಿಗಳಲ್ಲಿ ವಿಚಾರಮಾಡಿ ತಕ್ಕ ಕ್ರಮವನ್ನು ತೆಗೆದುಕೊಳ್ಳುತ್ತೇವೆ.

ಶ್ರೀ ಬಾಪೂಗೌಡ.—ತಾಲ್ಲೂಕು ಬೋರ್ಡಿನವರು ಇದಕ್ಕೆ ಬೇಕಾದಷ್ಟು ಹಣವನ್ನು ಒದಗಿಸಿ ಕೊಡಬೇಕೆಂದು ಕೇಳಿರುವುದು, ಅದರ ಬಗ್ಗೆ ಮಾಹಿತಿ ಸರ್ಕಾರದಲ್ಲಿದೆಯೇ?

ಶ್ರೀ ಎನ್. ಎಂ. ಕೊಟ್ರಬಸಯ್ಯ ಸೋಗಿ.—ಸರ್ಕಾರದಲ್ಲಿ ಅದರ ಬಗ್ಗೆ ಮಾಹಿತಿ ಇಲ್ಲ.

Filling of the Post of Surgeon in Government Hospital in Udipi Taluk

176. **Sri S. JAYAPRAKASH SHETTY** (Brahmavar).—

Will the Minister for Health be pleased to state :—

(*a*) whether the post of Chief Surgeon in Government Hospital in Taluk Headquarters, Udipi Taluk, South Kanara District, was vacant for sometime recently, if so, for how many months ;

(*b*) the steps taken by the Government for the expansion of the said hospital ;

(*c*) whether it has come to their notice that it is not possible to conduct major operations in the said hospital for want of anaesthetist ?

Sri G. BASAVANNAPPA (Deputy Minister for Health).—

(*a*) Yes. A Doctor has been appointed as incharge Surgeon since 7th August 1969.

(*b*) There is no question of expansion for the present.

(*c*) Yes.

ಶ್ರೀ ಎಸ್. ಜಯಪ್ರಕಾಶ್ ಶೆಟ್ಟಿ.—ನನ್ನ (ಅ) ಪ್ರಶ್ನೆಗೆ ಉತ್ತರವಾಗಿ ಎಷ್ಟು ತಿಂಗಳುಗಳಿಂದ ಈ ಸ್ಥಾನ ತೆರವಾಗಿತ್ತೆಂದು ಕೇಳಿದ್ದಕ್ಕೆ ಇಷ್ಟೇ ತಿಂಗಳುಗಳಿಂದ ಅದು ಖಾಲಿಯಾಗಿತ್ತೆಂದು ಏಕೆ ಹೇಳಲಿಲ್ಲ ?

ಶ್ರೀ ಜಿ. ಬಸವಣ್ಣಪ್ಪ.—ಅಲ್ಲಿ ಈಗ ಡಿಸ್ಟ್ರಿಕ್ಟ್ ಸರ್ಜನ್ ಡಾ. ಎನ್. ಎಲ್. ಪೂಂಜಾ ಅವರ ಸ್ಥಳದಲ್ಲಿ ಹಾಲಿ ಇದ್ದ ಡಾಕ್ಟರ್ ಇನ್ ಚಾರ್ಜ್ ಸರ್ಜನ್ ಆಗಿ ಕೆಲಸಮಾಡುತ್ತಿದ್ದಾರೆ. ಅಲ್ಲಿ ಆ ಹುದ್ದೆ 23-7-1969 ರಿಂದ ಖಾಲಿ ಇದೆ.

ಶ್ರೀ ಬಿ. ಭಾಸ್ಕರ ಶೆಟ್ಟಿ.—ಅಲ್ಲಿ ಈಗ ಇನ್‌ಚಾರ್ಜ್ ಸರ್ಜನ್ ಅನೇಕ ಬಿಲ್‌ಗಳಲ್ಲಿ ಮೆಡಿಕಲ್ ಆಫೀಸರ್ ಎಂದು ಸೈನ ಮಾಡಿದ್ದಾರೆ. ಇನ್‌ಚಾರ್ಜ್ ಸರ್ಜನ್ ಯಾರು ? ಆ ಸರ್ಜನ್ ಫೋನ್ನನ್ನು ಯಾವಾಗ ಬರ್ತಿಮಾಡಿದ್ದೀರಿ ? ಇದು ಬಹಳ ದೊಡ್ಡ ಆಸ್ಪತ್ರೆಯಾಗಿರುವುದರಿಂದ ಸರ್ಜನ್ ಫೋನ್ನನ್ನು ಯಾವಾಗ ಬರ್ತಿಮಾಡುತ್ತೀರಾ ?

ಶ್ರೀ ಜಿ. ಬಸವಣ್ಣಪ್ಪ.—ಅಲ್ಲಿ ಇನ್‌ಚಾರ್ಜ್ ಇರುವ ಸರ್ಜನ್ ಶ್ರೀಮತಿ ಭಾಗ್ಯರತ್ನ ಅವರು. ಅಲ್ಲಿಗೆ ಈಗಾಗಲೇ ಒಬ್ಬ ಡಾಕ್ಟರನ್ನು ಸೋಮವಾರ ಪೇಟೆಯಿಂದ ಪೋಸ್ಟ್ ಮಾಡಿದ್ದೇವೆ. ಅವರ ಹೆಸರು ಡಾ. ವೈ. ನರಸಿಂಹಶೆಟ್ಟಿಯವರು. ಅವರನ್ನು ಈಗ ರಿಲೀವ್ ಮಾಡಬೇಕಾಗಿರುವುದರಿಂದ that Order is kept in abeyance. He will be posted immediately.

ಶ್ರೀ ಬಿ. ಎಂ. ಇದಿನಬ್ಬ.—(ಇ) ಪ್ರಶ್ನೆಗೆ ಉತ್ತರವಾಗಿ 'ಬಂದಿದೆ' ಎಂದು ಹೇಳಿದಿರಿ. ಆದರೆ ಉಡುಪಿ ತಾಲ್ಲೂಕು ಮುಖ್ಯಾಲಯದ ಆಸ್ಪತ್ರೆ ಜನರು ಹೆಚ್ಚಿಗೆ ಬರುವುದರಿಂದ ಅಲ್ಲಿ ಬಹಳ ದೊಡ್ಡ ದೊಡ್ಡ ಅಪರೇಷನ್‌ಗಳನ್ನು ಮಾಡಬೇಕಾಗಿರುತ್ತದೆ. ಆದುದರಿಂದ ಆದಷ್ಟು ಜಾಗ್ರತೆ ಕ್ರಮ ತೆಗೆದುಕೊಳ್ಳುವುದು ಒಳ್ಳೆಯದಲ್ಲವೆ ?

ಶ್ರೀ ಜಿ. ಬಸವಣ್ಣಪ್ಪ.—ಈ ಪ್ರಾಬ್ಲಂ ಏನಿದೆಯೆಂಬುದು ಸರ್ಕಾರದ ಗಮನಕ್ಕೆ ಬಂದಿದೆ. ನಮ್ಮ ರಾಜ್ಯದಲ್ಲಿ ಅನಾಸ್ಥೇಯಿಸ್ಟ್‌ಸ್ ಇಷ್ಟು ಇಲ್ಲ. ಅದಕ್ಕಾಗಿ ಯಾವ ಡಾಕ್ಟರನ್ನು ಅಲ್ಲಿ ಹಾಕಲಕ್ಕೆ ಆಗಲಲ್ಲ. ಮಣಿಪಾಲ್ ಆಸ್ಪತ್ರೆ ಪಕ್ಕದಲ್ಲಿದೆ.

ಶ್ರೀ ಸಿ. ಎಂ. ಎಸ್. ಶಾಸ್ತ್ರಿ.—ಉಡುಪಿ ತಾಲ್ಲೂಕು ಸರ್ಕಾರಿ ಆಸ್ಪತ್ರೆಯಲ್ಲಿ ಮುಖ್ಯ ಸರ್ಜನ್ ಅವರು ಎಷ್ಟು ತಿಂಗಳುಗಳಿಂದ ಇರಲಿಲ್ಲ ? ಅದು ಎಷ್ಟು ತಿಂಗಳುಗಳಿಂದ ಖಾಲಿ ಇತ್ತು ? ಈಗ ಏನಾದರೂ ಸರ್ಜನ್ಸ್ ಅಭಾವ ಇದೆಯೇ ?

ಶ್ರೀ ಜಿ. ಬಸವಣ್ಣಪ್ಪ.—2-"-1969ರಲ್ಲಿ ಶ್ರೀ ವೈ. ನರಸಿಂಹಶೆಟ್ಟಿಯವರನ್ನು ಪೋಸ್ಟ್ ಮಾಡಿದೆ, ಅವರನ್ನು ಸದ್ಯದಲ್ಲಿಯೇ ಕಳುಹಿಸಲಾಗುತ್ತದೆ.

ಶ್ರೀ ಎಸ್. ಜಯಪ್ರಕಾಶ್ ಶೆಟ್ಟಿ.—ಈ ಸ್ಥಾನ ಎಷ್ಟು ದಿವಸಗಳಿಂದ ಖಾಲಿ ಇದೆ ?

ಶ್ರೀ ಜಿ. ಬಸವಣ್ಣಪ್ಪ.—23-7-1969ರಿಂದ ಖಾಲಿ ಇದೆ.

ಶ್ರೀ ಎಸ್. ಜಯಪ್ರಕಾಶ್ ಶೆಟ್ಟಿ.—ಅಲ್ಲಿನ ಡಾಕ್ಟರುಗಳ ಸಂಖ್ಯೆಯೆಷ್ಟು ?

ಶ್ರೀ ಜಿ. ಬಸವಣ್ಣಪ್ಪ.—ಸರ್ಜನ್ ಒಬ್ಬರು, ಆಸಿಸ್ಟೆಂಟ್ ಸರ್ಜನ್ಸ್ ಮೂವರು.

ಶ್ರೀ ಎಸ್. ಜಯಪ್ರಕಾಶ್ ಶೆಟ್ಟಿ.—ಉಡುಪಿ ತಾಲ್ಲೂಕಿನಲ್ಲಿ ಸರ್ಕಾರದ ಆಸ್ಪತ್ರೆ ಇದ್ದರೂ ಅಲ್ಲಿ ಕ್ವಾರ್ಟರ್ಸ್ ಇಲ್ಲವೆಂದು ಡಾಕ್ಟರುಗಳು ಹೋಗುವುದಿಲ್ಲ. ಅದಕ್ಕೊಸ್ಕರ ಈಗ ಅಲ್ಲಿಗೆ ಹಾಕಿರತಕ್ಕ ಡಾಕ್ಟರ್ ಹೋಗುತ್ತಿಲ್ಲ. ಇನ್ನೂ ರಿಲೀವ್ ಆಗಿಲ್ಲವೆಂಬ ವದಂತಿ ಇದೆ. ಅಲ್ಲಿಗೆ ಬರುವವರಿಗೆ ಚಿಕಿತ್ಸೆಗೆ ಅನುಕೂಲ ಮಾಡಿಕೊಡುವುದಕ್ಕೆ ಸರ್ಕಾರ ಈಗಲಾದರೂ ಸಿದ್ಧವಿದೆಯೇ ?

ಶ್ರೀ ಜಿ. ಬಸವಣ್ಣಪ್ಪ.—ಇದು ಉಡುಪಿ ಸರ್ಕಾರದ ಆಸ್ಪತ್ರೆ ಪ್ರಶ್ನೆ. ಅಲ್ಲಿ ಕ್ವಾರ್ಟರ್ಸ್ ಸೌಕರ್ಯವಿದೆ. ಅದ್ದರಿಂದ ಮಾನ್ಯ ಸದಸ್ಯರ ಪ್ರಶ್ನೆ ಇಲ್ಲಿ ಉದ್ಭವಿಸುವುದಿಲ್ಲ.

ಶ್ರೀ ಸುಬ್ಬರಾವ್ ಹಲಸನಾಡ್.—ಉಡುಪಿಯಲ್ಲಿ ನರಸಿಂಹ ಶೆಟ್ಟಿಯವರನ್ನು ನೇಮಕ ಮಾಡಿದ್ದೀರಿ ಎಂದು ಹೇಳಿದ್ದೀರಿ, ಅವರು ಕುಂದಾಪುರದಲ್ಲಿ ಇದ್ದಾಗ ಅವರ ಮೇಲೆ ತುಂಬಾ ಕಂಪ್ಲೇಟ್ಸ್ ಬಂದಿರುವುದು ಸರಕಾರದ ಗಮನಕ್ಕೆ ಬಂದಿದೆಯೇ ?

ಶ್ರೀ ಜಿ. ಬಸವಣ್ಣಪ್ಪ.—ಅದರ ಬಗ್ಗೆ ಯಾವ ಮಾಹಿತಿಯೂ ಇಲ್ಲ.